PRESSTONIC

You visualize... We realize

CIN: L28995KA2021PLC145718

Ref: Presstonic/NSE /59/2026 Date: 02.09.2026

To,
The Manager (Listing and Compliance Department)
National Stock Exchange of India Limited
Exchange Plaza, C-1, Block G
Bandra Kurla Complex, Bandra (E)
Mumbai- 400 051

Dear Sir/Madam,

Sub: Newspaper Publication – Notice of 5th Annual General Meeting, e-Voting Information and Cut-off date

Symbol: PRESSTONIC

Pursuant to Regulation 30 & other applicable Regulations of the SEBI (Listing Obligations and Disclosure Requirements) Regulations, 2015, please find enclosed herewith the copies of newspaper advertisement published on 2nd September 2026 in "Business Standard" (English – All editions) and "Prajawani" (Kannada – Bangalore edition) regarding the 5th Annual General Meeting of the Company.

This is for your kind information and records.

Thanking you,

For **PRESSTONIC ENGINEERING LIMITED**

NISHANTH N S
Digitally signed by NISHANTH N S
Date: 2026.09.02 09:53:31 +05'30'

NISHANTH NS
Company Secretary & Compliance Officer
M.No. A81399

PHOTO: SHUTTERSTOCK

Battle for beds

An increase in the number of private hospital beds hides a larger story: The additional capacity is being too easily absorbed. Plus these beds are mostly in hospital chains and used for complex, pricey procedures

SOHINI DAS
Mumbai, 1 September

The sight of patients lining hospital corridors, waiting to be assigned a bed, is a common one in India. Yet, attempts to improve this very basic health infrastructure have moved at a snail's pace.

Now, India's large private hospital chains are embarking on their biggest capacity expansion in recent years, investing heavily in oncology, cardiology, transplants and robotic surgery. Yet, the planned addition pales before the nation's needs — early evidence suggests the new beds are quickly filling up.

Eighteen large private hospital chains are expected to add more than 34,000 beds between FY26 and FY30, involving an investment of around ₹40,000 crore, according to the rating agency Icra. This would expand their combined capacity by 48-50 per cent from March 2025 levels.

But Apollo Hospitals — one of the 18 — estimates India needs another 2.4 million high-quality hospital beds. By this measure, the entire five-year pipeline of the 18 large chains would meet only around 1.4 per cent of what is needed.

Icra separately estimates these additions at only 2.3-2.5 per cent of India's existing private hospital capacity, suggesting the expansion will increase organised hospital chains' share without improving bed availability nationally. In other words, the additions are mostly in existing hospitals, rather in new ones being built.

Falling short
India currently has an estimated 1.3-1.4 million private hospital beds. There is no data on the total number of hospital beds that would include both private and public hospitals and other healthcare establishments

The expansion comes against a wider shortage of hospital infrastructure. India had an estimated 1.4 hospital beds per 1,000 people in 2020 — even this meagre figure fell to 0.6 when only government hospitals were considered, according to a PRS Legislative Research analysis of the Union health ministry's demand for grants for 2026-27. The National Health Policy, 2017, recommends two beds per 1,000 people.

The government is seeking to bridge some of the gap through public investment as well as greater use of private capacity. A total of 38,466 public and private hospitals, for instance, are empanelled under Ayushman Bharat–Pradhan Mantri Jan Arogya Yojana (PM-JAY), with the health assurance scheme having covered nearly 127 million hospitalisations worth 1.92 trillion as of June-end, according to government data.

Not surprisingly, the new capacity is filling fast, showing high pent-up demand and a general shortage of beds. Icra's sample of 11 listed hospital companies recorded a healthy occupancy of 63.5 per cent in FY26 despite capacity expansion, and it expects aggregate occupancy to remain around 62-64 per cent through FY27.

Anuj Sethi, senior director, Crisil Ratings, said, "Post-pandemic, healthcare demand has witnessed a structural shift, driven by the growing prevalence of non-communicable diseases, expanding health insurance penetration, and better affordability of quality healthcare services."

Hospital operators have consequently pushed capacity additions since FY23, particularly in metros and tier-I and tier-II cities where people's paying capacity supports faster ramp-up.

In Q1FY27, Max Healthcare reported 75 per cent occupancy despite a 13 per cent year-on-year increase in operational beds, followed by Apollo Hospitals at 70 per cent, Fortis Healthcare at 68.7 per cent and Manipal Health Enterprises at 65 per cent.

The chains also entered the expansion cycle with relatively high utilisation. In FY26, Max reported occupancy of 76 per cent, Apollo 67 per cent and Fortis 68 per cent, while Manipal recorded pro-forma occupancy of 64.45 per cent.

In some cases, occupied beds provide a clearer indication of demand. Fortis' occupancy remained at 69 per cent in the June quarter, but its occupied-bed count rose 17 per cent year-on-year to 3,418 as capacity expanded. At Max Smart in Delhi and Nanavati Max, Mumbai, recently opened beds have already reached around 80 per cent occupancy.

Manipal's new Yelahanka and Kanakapura hospitals in Bengaluru achieved earnings before interest, taxes, depreciation, and amortisation (Ebitda) break-even within two and five months, respectively, while Aster's Kasaragod greenfield hospital in Kerala broke even within nine months.

The money trail
However, the expansion is not evenly distributed across the spectrum of hospital care. Investment is increasingly flowing into specialties such as cardiac sciences, oncology, neurosciences, gastroenterology and orthopaedics — collectively referred to by Crisil Ratings as Congo specialties.

These specialties now account for around 65 per cent of hospitals' revenues, up from about 59 per cent before the pandemic, according to Crisil. Oncology alone has increased its share from around 12 per cent to 18 per cent.

Sethi said the shift reflected both a shortage of specialised oncology capacity and a move towards higher revenue potential. Oncology generates revenue across diagnostics, surgery, radiation therapy, chemotherapy and followup care, he said.

The changing case-mix is helping hospitals generate more revenue from existing capacity. "This strategic shift has enabled hospitals to maintain strong occupancy levels despite ongoing capacity additions, while simultaneously driving higher Average Revenue Per Occupied Bed (ARPOB) through a more favourable case-mix," Sethi said.

THE GOVERNMENT IS SEEKING TO BRIDGE THE GAP THROUGH PUBLIC INVESTMENT AS WELL AS GREATER USE OF PRIVATE CAPACITY. A TOTAL OF 38,466 PUBLIC AND PRIVATE HOSPITALS ARE EMPANELLED UNDER AYUSHMAN BHARAT-PMJAY

Aster DM Quality Care plans to add 4,170 beds over three to four years, taking capacity to around 15,000 beds, with about 53 per cent of the expansion coming through brownfield projects. The group has identified oncology as a major opportunity, alongside cardiac sciences, transplants and robotic procedures.

"India today is a metro-tier oncology country. We are the ones who are challenging that (by expanding to small towns)," Varun Khanna, managing director and group chief executive officer, Aster DM Quality Care, said in the Q1FY27 earnings call.

Oncology would account for a substantial part of its brownfield investment, he added.

Aster's robotic surgery volumes increased 80 per cent year-on-year (Y-o-Y) during the June quarter, joint replacements 39 per cent and transplants 19 per cent.

Manipal Health Enterprises is similarly strengthening oncology, cardiac sciences, neurology, gastroenterology, orthopaedics and renal sciences. These centres of excellence contributed around 65 per cent of Q1FY27 revenue, with inpatient revenue from these specialties rising 45 per cent.

"We would want to remain a specialty provider... really leading in clinical outcomes in these complex procedures," Managing Director and Chief Executive Officer Dilip Jose said. The company plans around ₹4,000 crore of capital expenditure to add approximately 3,000 beds over the next three to four years.

Apollo Hospitals plans to increase its beds to 14,100 by FY31.

Max Healthcare's operational capacity increased 13 per cent year-on-year to 5,379 beds in the June quarter, while occupancy remained at 75 per cent. Around half of the new 400-bed tower at Max Smart in Delhi has opened, with the operationalised beds already at approximately 80 per cent occupancy. Recently added beds at Nanavati Max have reached similar utilisation.

Fortis added 100 brownfield beds during the quarter and plans to operationalise another 400 during FY27.

New capacity nevertheless weighs on profitability before the case and payer mix improves.

Apollo's recently commissioned hospitals reported an Ebitda loss of ₹38 crore during the June quarter.

Max also said its margins were affected by newly commissioned brownfield beds and the acquisition of Kalinga Hospital.

"First, you ramp up occupancy... and as you ramp up, you start improving your ARPOBs," Max Healthcare Chairman and Managing Director Abhay Soi said. Profitability generally begins accelerating after occupancy and revenue stabilise, typically by the second or third quarter of operations, he added.

Economics of expansion
The combination of stronger occupancy and a richer specialty mix has also changed the economics of expansion.

According to Crisil, operating margins for the sector have risen from around 14-15 per cent before the pandemic to nearly 20-21 per cent currently.

Sethi said healthy occupancy and stronger returns were allowing hospital operators to continue investing in capacity, particularly in high-end specialties.

At the same time it's hard to estimate the demand for general surgery and other admissions.

Icra expects aggregate occupancy among its sample of listed hospital companies to remain around 62-64 per cent despite the expansion.

However, the concentration of investment in high-end specialties suggests that while the bed-building cycle should strengthen organised hospital networks, it may do considerably less to close India's wider shortage of affordable, general hospital capacity.

Capacity check



Note: Aster DM–Quality Care's FY26 occupancy is on a pro-forma combined basis; no comparable combined FY25 figure was disclosed. Manipal's FY25 and FY26 occupancy figures are also on a pro-forma basis. Fortis's bed capacity includes 1,184 O&M (operating & managing) beds. Occupancy rates are company-reported, except Aster DM–Quality Care's FY26 figure, which is from Icra's rating rationale dated July 10, 2026. Source: Company disclosures; Manipal Health RHP; Icra for Aster DM–Quality Care's pro-forma FY26 occupancy

ಪಾಲಿಕೆ ಶಾಲೆಗಳಲ್ಲಿ ಮುಖಚರ್ಯೆ ಹಾಜರಾತಿ

ವೈಟ್ ಟಾಪಿಂಗ್ ಕಾಮಗಾರಿಗೆ ವೇಗ ನೀಡಲು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದೂ ನಗರ ಪಾಲಿಕೆಗಳ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ 'ಮುಖಚರ್ಯೆ ಆಧಾರಿತ ಹಾಜರಾತಿ ವ್ಯವಸ್ಥೆ' ಜಾರಿಗೊಳಿಸುವಂತೆ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರು ಶಿಕ್ಷಣ ವಿಭಾಗದ ವಿಶೇಷ ಆಯುಕ್ತರಿಗೆ ಸೂಚನೆ ನೀಡಿದರು.

ಅಭಿವೃದ್ಧಿ ಕಾಮಗಾರಿಗಳು, ಯೋಜನೆಗಳು, ಕಾರ್ಯಕ್ರಮಗಳು ಸೇರಿದಂತೆ ವಿವಿಧ ವಿಷಯಗಳ ಕುರಿತು ಮಂಗಳವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಮುಖಚರ್ಯೆ ಆಧಾರಿತ ಹಾಜರಾತಿ ವ್ಯವಸ್ಥೆ ಜಾರಿಯಲ್ಲಿದ್ದು, ಆ ಮಾದರಿಯನ್ನು ಪಾಲಿಕೆ ಶಾಲೆಗಳಲ್ಲಿಯೂ ಅಳವಡಿಸಿಕೊಳ್ಳುವಂತೆ ಹೇಳಿದರು.

ಶಾಲಾ ಮಕ್ಕಳಿಗೆ ಸಮವಸ್ತ್ರಗಳನ್ನು ನಿಗದಿತ ಸಮಯದಲ್ಲಿ ವಿತರಿಸಬೇಕು. ಸಿಎಸ್‌ಆರ್ ಅನುದಾನದಲ್ಲಿ ಶೌಚಾಲಯಗಳನ್ನು ನಿರ್ಮಿಸಿ, ಅವುಗಳ ಸಮರ್ಪಕ ನಿರ್ವಹಣೆಗೆ ಕ್ರಮ ಕೈಗೊಳ್ಳಬೇಕು. ಪಾಲಿಕೆಗಳಲ್ಲಿನ ಶಿಕ್ಷಣ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಶಿಕ್ಷಣ ಇಲಾಖೆಯ ಅಧಿಕಾರಿಗಳೊಂದಿಗೆ ಪ್ರತ್ಯೇಕ ಸಭೆ ನಡೆಸಬೇಕು ಎಂದು ಆಯುಕ್ತರಿಗೆ ತಿಳಿಸಿದರು.

ನಗರದಲ್ಲಿ ₹1,700 ಕೋಟಿ ವೆಚ್ಚದಲ್ಲಿ 120.60 ಕಿ.ಮೀ. ಉದ್ದದ 117 ರಸ್ತೆಗಳಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಪ್ರಗತಿಯಲ್ಲಿದ್ದು, ಈ ಪೈಕಿ 61.43 ಕಿ.ಮೀ. ಕಾಮಗಾರಿ ಪೂರ್ಣಗೊಂಡಿದೆ. ಬಾಕಿ ಇರುವ 59.26 ಕಿ.ಮೀ. ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಸಚಿವರು ಸೂಚಿಸಿದರು.

ರಸ್ತೆ ಕಾಮಗಾರಿ ಕೈಗೆತ್ತಿಕೊಳ್ಳುವ ಸಂದರ್ಭದಲ್ಲಿ ಪಾದಚಾರಿ ಮಾರ್ಗಗಳನ್ನು ಅತಿಯಾಗಿ ಎತ್ತರಿಸುವ ಬದಲು, ವ್ಹೀಲ್‌ಚೇರ್‌ಗಳ ಸುಗಮ ಸಂಚಾರಕ್ಕೆ ಅನುಕೂಲವಾಗುವಂತೆ ನಿರ್ಮಿಸಬೇಕು. ಮರಗಳ ಸುತ್ತಲೂ ಗ್ರಾಸ್ ಪೇವರ್ ಬ್ಲಾಕ್‌ಗಳನ್ನು ಕಡ್ಡಾಯವಾಗಿ ಅಳವಡಿಸಬೇಕೆಂದು ನಿರ್ದೇಶನ ನೀಡಿದರು.

ಸಭೆಯಲ್ಲಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್, ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಸುಷಮಾ ಗೋಡಬೋಲೆ, ನಿತೀಶ್, ವೆಂಕಟಾಚಲಪತಿ, ನಗರ ಪಾಲಿಕೆ ಆಯುಕ್ತರಾದ ರಮೇಶ್ ಡಿ.ಎಸ್., ಪೊಮ್ಮಲ ಸುನೀಲ್ ಕುಮಾರ್, ರಮೇಶ್ ಕೆ.ಎನ್., ಜಿ. ಜಗದೀಶ್, ಡಾ. ರಾಜೇಂದ್ರ ಕೆ.ವಿ., ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ ಸಿಇಒ ಕರೀಗೌಡ ಉಪಸ್ಥಿತರಿದ್ದರು.

'ಪಾರ್ಕ್ ನಿರ್ವಹಣೆಯ ಹಣ ಲೂಟಿ'

ನಗರದಲ್ಲಿರುವ ಉದ್ಯಾನಗಳ ನಿರ್ವಹಣೆ ಸಮರ್ಪಕವಾಗಿ ನಡೆಯುತ್ತಿಲ್ಲ. ಹಲವು ಉದ್ಯಾನಗಳಲ್ಲಿ ಕಸ ಹಾಗೆಯೇ ಬಿದ್ದಿದ್ದು, ಸಮರ್ಪಕವಾಗಿ ಕೆಲಸ ನಿರ್ವಹಿಸದೆ ನಿರ್ವಹಣೆಯ ಹೆಸರಿನಲ್ಲಿ ಹಣ ಲೂಟಿ ಮಾಡಲಾಗುತ್ತಿದೆಯೇ? ಎಂದು ಕೃಷ್ಣ ಬೈರೇಗೌಡ ಪ್ರಶ್ನಿಸಿದರು.

ಬೆಂಗಳೂರು ಹಿಂದೆ ಉದ್ಯಾನಗಳಿಗೆ ಹೆಸರುವಾಸಿಯಾಗಿತ್ತು. ಆದರೆ ಈಗ ಅವುಗಳ ಸ್ಥಿತಿ ಸರಿಯಿಲ್ಲ. ಸರಿಯಾಗಿ ನಿರ್ವಹಿಸದಿದ್ದರೆ, ನೀವೇ ಜವಾಬ್ದಾರರಾಗುತ್ತೀರಿ' ಎಂದು ತೋಟಗಾರಿಕಾ ವಿಭಾಗದ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಸುಮನಹಳ್ಳಿಯಲ್ಲಿ ಮಾತ್ರ ಪ್ರಾಣಿಗಳ ಚಿತಾಗಾರವಿದ್ದು, ಉಳಿದ ಪಾಲಿಕೆಗಳಲ್ಲಿಯೂ ಪ್ರಾಣಿಗಳ ಚಿತಾಗಾರಗಳನ್ನು ನಿರ್ಮಿಸಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದರು.

'ನಗರ ಹಾಳು ಮಾಡಲೆಂದೇ ಕೆಲಸ ಮಾಡುತ್ತಿದ್ದೀರಾ'

'ಹೊರವಲಯ ರಸ್ತೆಯಲ್ಲಿ ಹೈಡೆನ್ಸಿಟಿ ಕಾರಿಡಾರ್ ಯೋಜನೆಯಡಿ ಪೂರ್ಣಗೊಂಡಿರುವ ಕಾಮಗಾರಿಗಳಲ್ಲಿ ಪ್ರತಿ 20 ಮೀಟರ್‌ಗೆ ಒಂದು ವಿದ್ಯುತ್ ಕಂಬ ಅಳವಡಿಸಬೇಕಿದೆ. ಆದರೆ ಹಳೆಯ ಹಾಗೂ ಹೊಸ ವಿದ್ಯುತ್ ಕಂಬಗಳನ್ನು ಒಳಗೊಂಡಂತೆ ಕೆಲವೆಡೆ 5ರಿಂದ 10 ಮೀಟರ್‌ಗೊಂದು ಕಂಬಗಳನ್ನು ಅಳವಡಿಸಿರುವುದು ಕಂಡುಬಂದಿದೆ. ಇದು ಸಾರ್ವಜನಿಕರ ಹಿತದೃಷ್ಟಿಯಿಂದ ಮಾಡುತ್ತಿರುವ ಕಾಮಗಾರಿಯೇ ಅಥವಾ ಗುತ್ತಿಗೆದಾರರಿಗೆ ಬಿಲ್ ಪಾವತಿಸುವ ಉದ್ದೇಶದಿಂದ ಮಾಡುತ್ತಿರುವ ಕಾಮಗಾರಿಯೇ' ಎಂದು ಸಚಿವರು ಪ್ರಶ್ನಿಸಿದರು.

'ಬೆಂಗಳೂರು ಸುಧಾರಣೆಯಾಗಬೇಕೆಂದು ನೀವು ಕೆಲಸ ಮಾಡುತ್ತಿಲ್ಲ. ಹಾಳು ಮಾಡಲೆಂದೇ ಕೆಲಸ ಮಾಡುತ್ತಿದ್ದೀರಿ' ಎಂದು ಬಿ-ಸ್ಮೈಲ್ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಬಿ-ಸ್ಮೈಲ್ ವತಿಯಿಂದ ಕೈಗೆತ್ತಿಕೊಳ್ಳುತ್ತಿರುವ ಎಲಿವೇಟೆಡ್ ಕಾರಿಡಾರ್, ರೋಟರಿ ಮೇಲ್ಸೇತುವೆ ಸೇರಿದಂತೆ ವಿವಿಧ ಕಾಮಗಾರಿಗಳ ಕುರಿತು ಎಲ್ಲಾ ನಗರ ಪಾಲಿಕೆಗಳ ಹಿರಿಯ ಅಧಿಕಾರಿಗಳಿಗೆ ಪ್ರಾತ್ಯಕ್ಷಿಕೆ ನೀಡಿ, ಕಾಮಗಾರಿಗಳ ಸಮಗ್ರ ಮಾಹಿತಿಯನ್ನು ಒದಗಿಸುವಂತೆ ಸೂಚಿಸಿದರು.

ಅಮೆರಿಕ–ಇರಾನ್ ಸಂಘರ್ಷ ಮುಂದುವರಿದ ದಾಳಿ, ಪ್ರತಿದಾಳಿ

ವಾಷಿಂಗ್ಟನ್ (ಎಎಫ್‌ಪಿ): 'ವಾಣಿಜ್ಯ ಹಡಗುಗಳು ಮತ್ತು ಅಮೆರಿಕ ಪಡೆಯ ಮೇಲೆ ದಾಳಿ ಪ್ರಯತ್ನ ಮಾಡಿದ್ದಕ್ಕೆ ಪ್ರತಿಯಾಗಿ ಇರಾನ್‌ನ ರೆವಲ್ಯೂಷನರಿ ಗಾರ್ಡ್ಸ್ ಮೇಲೆ ತೀವ್ರವಾಗಿ ದಾಳಿ ನಡೆಸಲಾಗಿದೆ' ಎಂದು ಅಮೆರಿಕ ಸೇನೆ ಮಂಗಳವಾರ ಹೇಳಿದೆ. ಈ ದಾಳಿ–ಪ್ರತಿದಾಳಿಗಳು ಸಂಘರ್ಷವನ್ನು ಇನ್ನಷ್ಟು ತೀವ್ರಗೊಳಿಸುವ ಆತಂಕ ಹುಟ್ಟಿಸಿದೆ.

ಹೊರ್ಮುಜ್ ಜಲಸಂಧಿಯ ಮಾರ್ಗದಲ್ಲಿ ಹಲವು ಬಾರಿ ಸ್ಫೋಟದ ಸದ್ದುಗಳು ಕೇಳಿವೆ ಎಂದು ಇರಾನ್‌ನ ಸರ್ಕಾರಿ ಸುದ್ದಿಸಂಸ್ಥೆ ವರದಿ ಮಾಡಿದೆ. 'ಚಾಬಹಾರ್ ಮತ್ತು ಕೊನಾರಕ್ ಕೌಂಟಿಗಳಲ್ಲಿ ನಾಲ್ಕು ಕಡೆ ದಾಳಿ ನಡೆದಿವೆ' ಎಂದು ಅದು ಹೇಳಿದೆ. ಆದರೆ, ಹಾನಿ ಬಗ್ಗೆ ಯಾವುದೇ ಮಾಹಿತಿ ನೀಡಿಲ್ಲ.

'ಇರಾನ್ ಪಡೆಯು ಜಲಸಂಧಿಯಲ್ಲಿ ಜಲ ಬಾಂಬ್ ಅಳವಡಿಸುವ ವಿಫಲ ಪ್ರಯತ್ನ ನಡೆಸಿದೆ. ಅವರು ಜೋರ್ಡನ್‌ನ ನಮ್ಮ ಸೇನಾ ನೆಲೆಯ ಮೇಲೆ ಎಂಟು ಕ್ಷಿಪಣಿಗಳನ್ನು ಉಡಾಯಿಸಿದ್ದು, ಎಲ್ಲವನ್ನೂ ಯಶಸ್ವಿಯಾಗಿ ಹೊಡೆದುರುಳಿಸಲಾಗಿದೆ. ದೊಡ್ಡ ಮತ್ತು ತೀವ್ರವಾದ ದಾಳಿ ನಡೆಸಿದ್ದೇವೆ. ಅವರು ಪ್ರತಿದಾಳಿಗೆ ಪ್ರಯತ್ನಿಸಿದರೆ ಇನ್ನಷ್ಟು ತೀವ್ರವಾದ ಹೊಡೆತ ನೀಡಲಿದ್ದೇವೆ' ಎಂದು ಡೊನಾಲ್ಡ್ ಟ್ರಂಪ್ ತಮ್ಮ 'ಟ್ರುಥ್ ಸೋಷಿಯಲ್' ಜಾಲತಾಣದಲ್ಲಿ ಬರೆದುಕೊಂಡಿದ್ದಾರೆ.

'ಆಕ್ರಮಣಕಾರರಿಗೆ ಗಂಭೀರವಾದ ಶಿಕ್ಷೆ ಕಾದಿದೆ. ತಾನು ನಡೆಸಿದ ದಾಳಿಗೆ ಅಮೆರಿಕ ಪಶ್ಚಾತ್ತಾಪ ಪಡುವಂತೆ ಮಾಡಲಿದ್ದೇವೆ' ಎಂದು ರೆವಲ್ಯೂಷನರಿ ಗಾರ್ಡ್ಸ್‌ನ ವಕ್ತಾರ ಹೊಸ್ಸೇನ್ ಮೊಹೇಬಿ ಅವರು 'ಎಕ್ಸ್' ಪೋಸ್ಟ್‌ನಲ್ಲಿ ಎಚ್ಚರಿಸಿದ್ದಾರೆ.

ಪ್ರೆಸ್ಟೋನಿಕ್ ಇಂಜಿನಿಯರಿಂಗ್ ಲಿಮಿಟೆಡ್

PRESSTONIC You visualise... We realise

CIN: L28995KA2021PLC145718
ನೋಂದಾಯಿತ ಕಛೇರಿ: ಖಾತಾ ನಂ. 161, ಸೈಟ್ # 275 & 276,
14 ನೇ & 15 ನೇ ಕ್ರಾಸ್, ಕರೀಮ್ ಸಾಬ್ ಲೇಔಟ್, ಪೀಣ್ಯ ಹೆಗ್ಗನಹಳ್ಳಿ, ವಿಶ್ವನೀಡಂ,
ಬೆಂಗಳೂರು - 560091, ಕರ್ನಾಟಕ, ಭಾರತ | ದೂರವಾಣಿ ಸಂಖ್ಯೆ: 080-23480001
ಇ-ಮೇಲ್: cs@presstonengg.co ವೆಬ್‌ಸೈಟ್: www.presstonic.com

5ನೇ ವಾರ್ಷಿಕ ಸರ್ವಸಾಧಾರಣ ಸಭೆಯ ನೋಟೀಸ್

ಪ್ರೆಸ್ಟೋನಿಕ್ ಇಂಜಿನಿಯರಿಂಗ್ ಲಿಮಿಟೆಡ್ ("ಕಂಪನಿ") ಸದಸ್ಯರ 5ನೇ ವಾರ್ಷಿಕ ಸಾಮಾನ್ಯ ಸಭೆಯು ("AGM") ಈ ಕೆಳಗಿನ ಕಾರ್ಯಕಲಾಪಗಳನ್ನು ನಡೆಸಲು **ಗುರುವಾರ, 24 ಸೆಪ್ಟೆಂಬರ್, 2026 ರಂದು ಮಧ್ಯಾಹ್ನ 12.30 ಕ್ಕೆ (IST)** ವೀಡಿಯೊ ಕಾನ್ಫರೆನ್ಸಿಂಗ್ (VC) ಅಥವಾ ಇತರ ಆಡಿಯೊ-ವಿಷುವಲ್ ಮೂಲಕ (OAVM) ನಡೆಯಲಿದೆ ಎಂದು ಇದರ ಮೂಲಕ ತಿಳಿಸಲಾಗಿದೆ.

ಸಾಮಾನ್ಯ ಕಾರ್ಯಕಲಾಪಗಳು:
- ಲೆಕ್ಕಪರಿಶೋಧಕರ ವರದಿ ಮತ್ತು ಮಂಡಳಿಯ ವರದಿಯೊಂದಿಗೆ 2025-26 ರ ಹಣಕಾಸು ವರ್ಷಕ್ಕೆ ಕಂಪನಿಯ ಲೆಕ್ಕಪರಿಶೋಧಿತ ಹಣಕಾಸು ಹೇಳಿಕೆಗಳನ್ನು ಸ್ವೀಕರಿಸುವುದು, ಪರಿಗಣಿಸುವುದು ಮತ್ತು ಅಳವಡಿಸಿಕೊಳ್ಳುವುದು.
- ಸರದಿಯ ಪ್ರಕಾರ ನಿವೃತ್ತರಾಗುತ್ತಿರುವ ಮತ್ತು ಅರ್ಹರಾಗಿದ್ದು, ಮರು ನೇಮಕಾತಿಯನ್ನು ಬಯಸುತ್ತಿರುವ ಶ್ರೀಮತಿ ವಿದ್ಯಾಲಕ್ಷ್ಮಿ ರಾವ್ (DIN: 10191959) ಅವರ ಬದಲಿಗೆ ನಿರ್ದೇಶಕರನ್ನು ನೇಮಿಸುವುದು.

ವಿಶೇಷ ಕಾರ್ಯಕಲಾಪಗಳು:
- ಕಂಪನಿಗಳ ಕಾಯಿದೆ, 2013 ರ ವಿಭಾಗ 180(1)(C) ಗೆ ಅನುಗುಣವಾಗಿ ಕಂಪನಿಯ ಸಾಲದ ಮಿತಿಗಳ (borrowing limits) ಹೆಚ್ಚಳಕ್ಕೆ ಅನುಮೋದನೆ ನೀಡುವುದು.

ಟಿಪ್ಪಣಿಗಳು:
- ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ (MCA) ಹೊರಡಿಸಿದ ಸೆಪ್ಟೆಂಬರ್ 22, 2025 ರ ಸಾಮಾನ್ಯ ಸುತ್ತೋಲೆ ಸಂಖ್ಯೆ 03/2025 ಮತ್ತು SEBI ಅಕ್ಟೋಬರ್ 3, 2024 ರ ಸುತ್ತೋಲೆ ಸಂಖ್ಯೆ SEBI/HO/CFD/CFDPoD-2/P/CIR/2024/ 133 ಮತ್ತು ಇತರ ಅನ್ವಯವಾಗುವ ಸುತ್ತೋಲೆಗಳ ಪ್ರಕಾರ, ಕಂಪನಿಗಳು ಸಾಮಾನ್ಯ ಸ್ಥಳದಲ್ಲಿ ಸದಸ್ಯರ ಭೌತಿಕ ಉಪಸ್ಥಿತಿಯಿಲ್ಲದೆ VC/OAVM ಮೂಲಕ ವಾರ್ಷಿಕ ಸರ್ವಸಾಧಾರಣ ಸಭೆಯನ್ನು (AGM) ನಡೆಸಲು ಅನುಮತಿಸಲಾಗಿದೆ. ಸದಸ್ಯರು VC/OAVM ಮೂಲಕ ಸಭೆಯಲ್ಲಿ ಭಾಗವಹಿಸಬಹುದು.
- ಸಭೆಯು VC/OAVM ಮೂಲಕ ನಡೆಯುತ್ತಿರುವುದರಿಂದ, ಪ್ರಾಕ್ಸಿಗಳನ್ನು (Proxies) ನೇಮಿಸುವ ಸೌಲಭ್ಯವು ಲಭ್ಯವಿರುವುದಿಲ್ಲ. ಆದ್ದರಿಂದ ಪ್ರಾಕ್ಸಿ ಫಾರ್ಮ್, ಹಾಜರಾತಿ ಸ್ಲಿಪ್ ಮತ್ತು ರೂಟ್ ಮ್ಯಾಪ್ ಅನ್ನು ಈ ನೋಟೀಸ್‌ಗೆ ಲಗತ್ತಿಸಲಾಗಿಲ್ಲ.
- ಈ ನೋಟೀಸ್ ಅನ್ನು ಕಂಪನಿಯ ವೆಬ್‌ಸೈಟ್ https://www.presstonic.com ನಲ್ಲಿ, ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಾದ www.nseindia.com ನಲ್ಲಿ ಮತ್ತು NSDL ನ ವೆಬ್‌ಸೈಟ್ www.evoting.nsdl.com ನಲ್ಲಿ ವೀಕ್ಷಿಸಬಹುದು. ಎಲೆಕ್ಟ್ರಾನಿಕ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ಈ ಸೌಲಭ್ಯವನ್ನು ಪಡೆಯಲು ತಮ್ಮ ಡಿಪಾಸಿಟರಿ ಭಾಗಿಗಳನ್ನು (Depository Participants) ಸಂಪರ್ಕಿಸಬಹುದು. ಎಲೆಕ್ಟ್ರಾನಿಕ್ ರೂಪದಲ್ಲಿ ಷೇರುಗಳಿದ್ದ ಸದಸ್ಯರು ಈ ಸೌಲಭ್ಯವನ್ನು ಪಡೆಯಲು ತಮ್ಮ ಸಂಬಂಧಿತ ಡಿಪಾಸಿಟರಿ ಭಾಗವಹಿಸುವವರನ್ನು ಸಂಪರ್ಕಿಸಬಹುದು.

ಇ-ವೋಟಿಂಗ್ (E-voting) ಮಾಹಿತಿ:
- ರಿಮೋಟ್ ಇ-ವೋಟಿಂಗ್ ಸಮಯ: **ಸೋಮವಾರ, 21 ಸೆಪ್ಟೆಂಬರ್, 2026 ಬೆಳಿಗ್ಗೆ 9:00 ರಿಂದ ಬುಧವಾರ, 23 ಸೆಪ್ಟೆಂಬರ್, 2026 ಸಂಜೆ 5:00 ರವರೆಗೆ. ಕಟ್-ಆಫ್ ದಿನಾಂಕವಾದ ಗುರುವಾರ, 17 ಸೆಪ್ಟೆಂಬರ್, 2026 ರಂತೆ** ಸದಸ್ಯರ ನೋಂದಣಿಯಲ್ಲಿ ಹೆಸರಿರುವ ಷೇರುದಾರರು ಮತ ಚಲಾಯಿಸಬಹುದು. ರಿಮೋಟ್ ಇ-ವೋಟಿಂಗ್ ಮೂಲಕ ಮತ ಚಲಾಯಿಸದ ಸದಸ್ಯರು ಸಭೆಯ ಸಮಯದಲ್ಲಿ VC ಮೂಲಕ ಇ-ವೋಟಿಂಗ್ ಬಳಸಿ ಮತ ಚಲಾಯಿಸಬಹುದು. ಈಗಾಗಲೇ ಮತ ಚಲಾಯಿಸಿದವರು ಸಭೆಯಲ್ಲಿ ಭಾಗವಹಿಸಬಹುದೇ ಹೊರತು ಮತ್ತೆ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ.

ಹಣಕಾಸು ವರ್ಷ 2025-26 ರ ವಾರ್ಷಿಕ ವರದಿ ಅಥವಾ AGM ಗೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳಿದ್ದಲ್ಲಿ cs@presstonengg.co ಗೆ ಇಮೇಲ್ ಕಳುಹಿಸಬಹುದು.

ಪ್ರೆಸ್ಟೋನಿಕ್ ಎಂಜಿನಿಯರಿಂಗ್ ಲಿಮಿಟೆಡ್ ಪರವಾಗಿ
ಸಹಿ/-
ದಿನಾಂಕ : 01.09.2026
ಸ್ಥಳ : ಬೆಂಗಳೂರು
ಹೆರ್ಗ ಪೂರ್ಣಚಂದ್ರ ಕೆದಿಲಾಯ - ವ್ಯವಸ್ಥಾಪಕ ನಿರ್ದೇಶಕರು

ಛಾಯಾಚಿತ್ರಗಳಲ್ಲಿ ತ್ಯಾಜ್ಯ ಶ್ರಮಿಕರ ಜೀವನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾಜದ ಕಣ್ಣಿಗೆ ಕಾಣಿಸದ ತ್ಯಾಜ್ಯ ಶ್ರಮಿಕರ ದೈನಂದಿನ ಹೋರಾಟ, ಬದುಕು ಮತ್ತು ಜೀವನದ ಭಾವನಾತ್ಮಕ ಕ್ಷಣಗಳನ್ನು ಅವರದೇ ಸಮುದಾಯದವರು ಛಾಯಾಚಿತ್ರಗಳ ಮೂಲಕ ದರ್ಶನ ಮಾಡಿಸಿದ್ದಾರೆ.

ಹಸಿರು ದಳ, ಪೀಪಲ್ಸ್ ಫೋಟೊಗ್ರಾಫರ್ಸ್ ಕಲೆಕ್ಟಿವ್ ಮತ್ತು ಸಾಮೂಹಿಕ ಶಕ್ತಿ ಜಂಟಿಯಾಗಿ 'ಯಾರ ಬದುಕುಗಳನ್ನು ನಾವು ನೋಡುತ್ತಿದ್ದೇವೆ?' ಶೀರ್ಷಿಕೆಯಡಿ ನಗರದಲ್ಲಿ ಹಮ್ಮಿಕೊಂಡಿರುವ ಎರಡು ದಿನಗಳ ಛಾಯಾಚಿತ್ರ ಪ್ರದರ್ಶನಕ್ಕೆ ಮಂಗಳವಾರ ಚಾಲನೆ ದೊರೆಯಿತು. ಪ್ರದರ್ಶನವನ್ನು ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಸೌಮ್ಯಾ ರೆಡ್ಡಿ ಉದ್ಘಾಟಿಸಿದರು.

ಪೀಪಲ್ಸ್ ಫೋಟೊಗ್ರಾಫರ್ಸ್ ಕಲೆಕ್ಟಿವ್ ಸಂಸ್ಥಾಪಕರಾದ ಛಾಯಾಗ್ರಾಹಕ ಪಳನಿ ಕುಮಾರ್ ಮಾರ್ಗದರ್ಶನದಲ್ಲಿ ತ್ಯಾಜ್ಯ ಶ್ರಮಿಕರ ಸಮುದಾಯದ ಎಂಟು ಯುವಜನರಿಗೆ ಎಂಟು ತಿಂಗಳ ತರಬೇತಿ ನೀಡಲಾಗಿತ್ತು. 16ರಿಂದ 22 ವರ್ಷದೊಳಗಿನವರು ತರಬೇತಿಯಲ್ಲಿ ಪಾಲ್ಗೊಂಡಿದ್ದರು. ತರಬೇತಿ ಅವಧಿಯಲ್ಲಿ ಸೆರೆಹಿಡಿದ ಅಪರೂಪದ ಚಿತ್ರಗಳನ್ನು ಸಾರ್ವಜನಿಕರ ವೀಕ್ಷಣೆಗೆ ಈ ಪ್ರದರ್ಶನದಲ್ಲಿ ಇರಿಸಲಾಗಿದೆ. ತ್ಯಾಜ್ಯ ಶ್ರಮಿಕರ ಬದುಕನ್ನು ಕಟ್ಟಿಕೊಡುವ ಹಲವು ಛಾಯಾಚಿತ್ರಗಳು ಪ್ರದರ್ಶನದಲ್ಲಿವೆ.

'ಕೌಶಲ ವೃದ್ಧಿ, ನಾಯಕತ್ವ ಗುಣ ಬೆಳೆಸುವುದು ಮತ್ತು ತ್ಯಾಜ್ಯ ಶ್ರಮಿಕರ ಆಶಯಗಳನ್ನು ಅರ್ಥ ಮಾಡಿಕೊಳ್ಳುವುದು ನಮ್ಮ ಉದ್ದೇಶವಾಗಿತ್ತು' ಎಂದು ಹಸಿರು ದಳದ ಸಾಮೂಹಿಕ ಶಕ್ತಿ ಯೋಜನಾ ಮುಖ್ಯಸ್ಥೆ ಅನುಪ್ರಿಯಾ ತಿಳಿಸಿದರು.

ಪ್ರದರ್ಶನದಲ್ಲಿ ಯುವ ಛಾಯಾಗ್ರಾಹಕಿಯೊಬ್ಬರು ತಾವು ಸೆರೆಹಿಡಿದ ಛಾಯಾಚಿತ್ರಗಳ ಬಗ್ಗೆ ವಿವರಿಸಿದರು ಪ್ರಜಾವಾಣಿ ಚಿತ್ರ

ಬೆಂಗಳೂರು ಪೂರ್ವ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಮಾರತ್ತಹಳ್ಳಿ ವಿಭಾಗ,
ಬೆಳ್ಳಂದೂರು ಮುಖ್ಯರಸ್ತೆ, ಬೆಳ್ಳಂದೂರು, ಬೆಂಗಳೂರು – 560103.

ಸಂಖ್ಯೆ: ಬೆಂಪೂನಪಾ/ಕಾಅ/ಎಂಆರ್‌ಹೆಚ್/ಟಿಎನ್/03/2026–27 ದಿನಾಂಕ: 01–09–2026

ತಿದ್ದುಪಡಿ

ವಿಷಯ: ಟೆಂಡರ್ ಪ್ರಕಟಣೆಯ ದಿನಾಂಕಗಳಿಗೆ ತಿದ್ದುಪಡಿ.
ಉಲ್ಲೇಖ: ಕಾಅ/ಬೆಂಪೂನಪಾ/ಎಂಆರ್‌ಹೆಚ್/ಟಿಎನ್/03/2026–27, ದಿನಾಂಕ: 24–08–2026.

ಟೆಂಡರ್ ಪ್ರಕಟಣೆಯ ಸಂಖ್ಯೆ: ಕಾಅ/ಬೆಂಪೂನಪಾ/ಎಂಆರ್‌ಹೆಚ್/ಟಿಎನ್/03/2026–27, ದಿನಾಂಕ: 24–08–2026 ರಲ್ಲಿ ಬಿಡ್‌ನ್ನು ಸಲ್ಲಿಸುವ ಕೊನೆಯ ದಿನಾಂಕವನ್ನು ತಿದ್ದುಪಡಿ ಮಾಡಲಾಗಿದ್ದು, ಪರಿಷ್ಕೃತ ವೇಳಾಪಟ್ಟಿಯು ಈ ಕೆಳಗಿನಂತಿದೆ.

ಕ್ರ. ಸಂ.	ಟೆಂಡರ್ ವೇಳಾಪಟ್ಟಿ	ಹಿಂದಿನ ಪ್ರಕಟಣೆಯ ಪ್ರಕಾರ	ಮಾರ್ಪಡಿಸಿದ ದಿನಾಂಕಗಳ ಪ್ರಕಾರ
1	ವಿಚಾರಣೆಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ	31–08–2026 ರಂದು 11.00 ಗಂಟೆಯವರೆಗೆ	**08–09–2026 ರಂದು 11.00 ಗಂಟೆಯವರೆಗೆ**
2	ಬಿಡ್ ಪೂರ್ವಭಾವಿ ಸಭೆಯ ದಿನಾಂಕ ಮತ್ತು ಸಮಯ	31–08–2026 ರಂದು 16.00 ಗಂಟೆಗೆ	**08–09–2026 ರಂದು 15.00 ಗಂಟೆಗೆ**
3	ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ	05–09–2026 ರಂದು 16.00 ಗಂಟೆವರೆಗೆ	**16–09–2026 ರಂದು 16.00 ಗಂಟೆವರೆಗೆ**
4	ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ	07–09–2026 ರಂದು 16.30 ಗಂಟೆಗೆ	**17–09–2026 ರಂದು 16.30 ಗಂಟೆಗೆ**
5	ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ	**ತಾಂತ್ರಿಕ ಮೌಲ್ಯಮಾಪನಕ್ಕೆ ಅನುಮೋದನೆ ಪಡೆದ ನಂತರ ತಿಳಿಸಲಾಗುವುದು.**	

ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ಇತರೆ ಷರತ್ತು ನಿಬಂಧನೆಗಳಲ್ಲಿ ಬದಲಾವಣೆಗಳು ಇರುವುದಿಲ್ಲ.
ಸಹಿ/–
ಕಾರ್ಯಪಾಲಕ ಅಭಿಯಂತರರು, ಮಾರತ್ತಹಳ್ಳಿ ವಿಭಾಗ, ಬೆಂಪೂನಪಾ.

'ಟೋಟಲೈಸರ್' ಬಳಕೆ: ಕೇಂದ್ರದ ಪ್ರತಿಕ್ರಿಯೆ ಕೇಳಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಎಲೆಕ್ಟ್ರಾನಿಕ್ ಮತಯಂತ್ರಗಳಲ್ಲಿ (ಇವಿಎಂ) ದಾಖಲಾಗಿರುವ ಮತಗಳ ಎಣಿಕೆಗೆ 'ಟೋಟಲೈಸರ್'ಗಳ ಬಳಕೆಗೆ ನಿರ್ದೇಶನ ನೀಡುವಂತೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಯ ಕುರಿತು ಪ್ರತಿಕ್ರಿಯಿಸುವಂತೆ ಸುಪ್ರೀಂ ಕೋರ್ಟ್ ಮಂಗಳವಾರ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯಾ ಬಾಗ್ಚಿ ಮತ್ತು ವಿ. ಮೋಹನಾ ಅವರಿದ್ದ ಪೀಠವು, 'ಟೋಟಲೈಸರ್'ಗಳ ಬಳಕೆಗೆ ಚುನಾವಣಾ ನೀತಿಯಲ್ಲಿ ತಿದ್ದುಪಡಿ ತರುವ ಬಗ್ಗೆ ಕೇಂದ್ರ ಸರ್ಕಾರ ಪರಿಶೀಲಿಸಬೇಕು. ಅದಕ್ಕಿರುವ ಅಡೆತಡೆಗಳು ಯಾವುವು? 'ಟೋಟಲೈಸರ್' ಬಳಕೆಯಿಂದಾಗುವ ಅಡ್ಡಪರಿಣಾಮಗಳು ಏನು? ಎನ್ನುವುದನ್ನು ನಾವು ತಿಳಿದುಕೊಳ್ಳಲು ಬಯಸುತ್ತೇವೆ' ಎಂದು ತಿಳಿಸಿದೆ.

'ಟೋಟಲೈಸರ್' ಮತ ಎಣಿಕೆ ಸಾಧನವಾಗಿದ್ದು, ಇದರಿಂದ 14 ಮತಗಟ್ಟೆಗಳ ಮತಗಳನ್ನು ಏಕಕಾಲದಲ್ಲಿ ಎಣಿಸಬಹುದು.

'ಟೋಟಲೈಸರ್ ಬಳಕೆಗೆ ಹಲವು ಅಡೆತಡೆಗಳಿವೆ ಮತ್ತು ಹಲವಾರು ರಾಜಕೀಯ ಪಕ್ಷಗಳು ಇದಕ್ಕೆ ಒಪ್ಪಿಗೆ ಸೂಚಿಸಿಲ್ಲ' ಎಂದು ಚುನಾವಣಾ ಆಯೋಗದ ಪರ ವಕೀಲರು ನ್ಯಾಯಾಲಯಕ್ಕೆ ತಿಳಿಸಿದರು.

ಮತಗಳ ಎಣಿಕೆಗೆ 'ಟೋಟಲೈಸರ್'ಗಳನ್ನು ಬಳಸಲು ನಿರ್ದೇಶನ ನೀಡುವಂತೆ ಕೋರಿ ವಕೀಲರಾದ ಅಶ್ವಿನಿ ಉಪಾಧ್ಯಾಯ, ಯೋಗೇಶ್ ಗುಪ್ತಾ ಮತ್ತು ಇತರರು ಅರ್ಜಿ ಸಲ್ಲಿಸಿದ್ದರು.

ಕೃಷ್ಣಾ ಜಲವಿವಾದ: ನಾಳೆಯಿಂದ ವಿಚಾರಣೆ

ನವದೆಹಲಿ: 'ಕೃಷ್ಣಾ ಜಲವಿವಾದದ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ಗುರುವಾರದಿಂದ ವಿಚಾರಣೆ ನಡೆಯಲಿದ್ದು, ಸಮರ್ಥವಾಗಿ ವಾದ ಮಂಡಿಸುವಂತೆ ರಾಜ್ಯದ ಕಾನೂನು ತಜ್ಞರ ತಂಡಕ್ಕೆ ನಿರ್ದೇಶನ ನೀಡಲಾಗಿದೆ' ಎಂದು ಜಲಸಂಪನ್ಮೂಲ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಕರ್ನಾಟಕ ಭವನದಲ್ಲಿ ಕಾನೂನು ತಜ್ಞರ ತಂಡದ ಜತೆಗೆ ಮಂಗಳವಾರ ರಾತ್ರಿ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ರಾಜ್ಯಕ್ಕೆ ಹಂಚಿಕೆಯಾಗಿರುವ 130 ಟಿಎಂಸಿ ಅಡಿ ನೀರಿನ ಸದ್ಬಳಕೆಗೆ ಕೃಷ್ಣಾ ಜಲವಿವಾದ ನ್ಯಾಯಮಂಡಳಿಯ ಅಂತಿಮ ತೀರ್ಪಿನ ಗೆಜೆಟ್ ಅಧಿಸೂಚನೆಯನ್ನು ಕೇಂದ್ರ ಸರ್ಕಾರ ಶೀಘ್ರ ಹೊರಡಿಸಬೇಕು ಎಂದು ಅವರು ಆಗ್ರಹಿಸಿದರು.

'ಮೇಕೆದಾಟು ಯೋಜನೆಯ ವಿಸ್ತೃತ ಯೋಜನಾ ವರದಿ (ಡಿಪಿಆರ್) ಬಗ್ಗೆ ಕೇಂದ್ರ ಜಲ ಆಯೋಗ ವಿವರಣೆ ಕೇಳಿ ವಾಪಸ್ ಕಳುಹಿಸಿತ್ತು. ಪರಿಷ್ಕೃತ ಡಿಪಿಆರ್ ಅನ್ನು ಹದಿನೈದು ದಿನಗಳ ಹಿಂದೆ ಸಲ್ಲಿಸಲಾಗಿದೆ. ಬಳಿಕ, ಆಯೋಗದಿಂದ ಯಾವುದೇ ಉತ್ತರ ಬಂದಿಲ್ಲ. ಹೀಗಾಗಿ, ಕೇಂದ್ರ ಜಲ ಆಯೋಗದ ಅಧ್ಯಕ್ಷ ಅನುಪಮ್ ಪ್ರಸಾದ್ ಅವರನ್ನು ಬುಧವಾರ ಬೆಳಿಗ್ಗೆ ಭೇಟಿಯಾಗಿ ಮಾತುಕತೆ ನಡೆಸಲಾಗುವುದು' ಎಂದು ಅವರು ತಿಳಿಸಿದರು.

'ಭದ್ರಾ ಮೇಲ್ದಂಡೆ ಯೋಜನೆಗೆ ₹5,300 ಕೋಟಿ ನೆರವು ನೀಡುವುದಾಗಿ ಕೇಂದ್ರ ಬಜೆಟ್‌ನಲ್ಲಿ ಮೂರು ವರ್ಷಗಳ ಹಿಂದೆ ಘೋಷಿಸಲಾಗಿತ್ತು. ಈವರೆಗೆ ಚಿಕ್ಕಾಸೂ ಬಿಡುಗಡೆಯಾಗಿಲ್ಲ. ಯೋಜನೆಯ ಪರಿಷ್ಕೃತ ಅಂದಾಜು ಮೊತ್ತಕ್ಕೆ ಸಾರ್ವಜನಿಕ ಹೂಡಿಕೆ ಮಂಡಳಿ ಒಪ್ಪಿಗೆ ನೀಡಬೇಕು. ಈ ಪ್ರಕ್ರಿಯೆ ಬೇಗ ಮುಗಿಸಬೇಕು. ಜತೆಗೆ, ಅನುದಾನ ಕೂಡಲೇ ಬಿಡುಗಡೆ ಮಾಡಬೇಕು' ಎಂದು ಅವರು ಮನವಿ ಮಾಡಿದರು.

ಯೋಜನೆಗಳಿಗೆ ಅನುಮೋದನೆಗೆ ಒತ್ತಾಯ: ರಾಷ್ಟ್ರೀಯ ಜಲ ಇಲಾಖಾ ಸಮಾವೇಶದಲ್ಲಿ ಪಾಲ್ಗೊಂಡ ಸಚಿವರು, ಮಹದಾಯಿ, ಮೇಕೆದಾಟು ಮತ್ತಿತರ ಯೋಜನೆಗಳಿಗೆ ಅನುಮೋದನೆ ನೀಡುವಂತೆ ಮನವಿ ಮಾಡಿದರು. ಬಳಿಕ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ ಅವರೊಂದಿಗೆ ಮಾತುಕತೆ ನಡೆಸಿದರು.